**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಕಾವೇರಿ ಭವನ, 6ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು- 560 009.**

**ಅಧಿಸೂಚನೆ ಸಂಖ್ಯೆ: ಡಿಪಿಎನ್/ನೇ.ಸ./09/2019-2020, ದಿನಾಂಕ: 30.11.2022**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಖಾಲಿ ಇರುವ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮೀಸಲಾಗಿರುವ 24 ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಪ್ರಕಟಿಸಲಾಗಿದ್ದ ಅಧಿಸೂಚನೆ ಸಂಖ್ಯೆ: ಡಿಪಿಎನ್/ನೇ.ಸ./10/2019-2020, ದಿನಾಂಕ: 30.09.2019 ಸಂಬಂಧಿಸಿದಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನಡೆಸಲಾದ ಮುಖ್ಯ ಪರೀಕ್ಷೆ ಮತ್ತು ಮೌಖಿಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದಲ್ಲಿ ಮತ್ತು ಮೀಸಲಾತಿ ನಿಯಮಗಳಿನುಗುಣವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳ ಆಯ್ಕೆ ಸಮಿತಿಯು ಈ ಕೆಳಕಂಡ **05** ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದರಿಂದ ಮತ್ತು ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವಂತೆ ಆಯ್ಕೆ ಸಮಿತಿಯು ನಿರ್ಣಯಿಸಿರುವುದರಿಂದ ಸದರಿ ಅಭ್ಯರ್ಥಿಗಳ ಪಟ್ಟಿಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕವಾಗಿ ಈ ಮೂಲಕ ಪ್ರಕಟಿಸಲಾಗಿದೆ.

## ತಾತ್ಕಾಲಿಕ ಆಯ್ಕೆ ಪಟ್ಟಿ (Provisional Selection List)

(ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮೀಸಲಾಗಿರಿಸಿರುವ ಹುದ್ದೆಗಳಿಗೆ ಸಂಬಂಧಿಸಿದ)

| Sl No | Application Number | Name of the Candidate | Category | Full Category | Selected Category |
|---|---|---|---|---|---|
| 1 | APP300084 | HANAMAGOWDA | ST | STHRK | GM-HRU |
| 2 | APP300194 | MURTHUJA SABA | 2B | 2BHRK | GM-HRU |
| 3 | APP300070 | HOSAVADRA ANNESHA | SC | SCHRK | GM-HRU |
| 4 | APP300227 | INDIRA SUHASINI | ST | STHWK | GM-HW |
| 5 | APP300130 | BHARATI WADEKAR | SC | SCHW | GM-HW |

### ಟಿಪ್ಪಣಿ

1. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮೀಸಲಾಗಿದ್ದ ಸಾಮಾನ್ಯ ವರ್ಗ- 11 ಹುದ್ದೆಗಳಿಗೆ ಎದುರಾಗಿ 05 ಅಭ್ಯರ್ಥಿಗಳು ಮಾತ್ರ ಆಯ್ಕೆಗೆ ಲಭ್ಯವಿರುವುದರಿಂದ 02 ಅಭ್ಯರ್ಥಿಗಳನ್ನು ಸಾಮಾನ್ಯ ಮಹಿಳಾ ವರ್ಗದಲ್ಲಿ ಮತ್ತು 03 ಹುದ್ದೆಗಳನ್ನು ಸಾಮಾನ್ಯ ಗ್ರಾಮೀಣ ವರ್ಗದಲ್ಲಿ ಭರ್ತಿ ಮಾಡಲಾಗಿದೆ.

2. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮೀಸಲಾಗಿದ್ದ ಉಳಿದ ವರ್ಗದ ಹುದ್ದೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಲಭ್ಯವಿಲ್ಲದಿರುವುದರಿಂದ ಆ ಹುದ್ದೆಗಳನ್ನು ಭರ್ತಿ ಮಾಡಲಾಗಿಲ್ಲ.

ಅಧಿಸೂಚನೆಯಲ್ಲಿ ಬಳಸಿರುವ ಸಂಕ್ಷಿಪ್ತಾಕ್ಷರಗಳ ವಿಸ್ತೃತ ರೂಪ:

1. HRU - Hyderabad Karnataka Rural (ಗ್ರಾಮೀಣ ವರ್ಗ)
2. HW - Hyderabad Karnataka Women (ಮಹಿಳಾ ವರ್ಗ)

## ಷರತ್ತುಗಳು

1. ಪ್ರಕಟಿತ ತಾತ್ಕಾಲಿಕ ಆಯ್ಕೆ ಪಟ್ಟಿಯು ಮಾನ್ಯ ಕೆಎಟಿಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ: **3793–3811/2022** ಮತ್ತು ಪ್ರಕರಣಗಳ ಸಂಖ್ಯೆ: **4927–4949/2022**ರಲ್ಲಿ ಮಾನ್ಯ ಕೆಎಟಿಯು ನೀಡಬಹುದಾದ ಆದೇಶ/ತೀರ್ಪಿಗೆ ಒಳಪಟ್ಟಿರುತ್ತದೆ.
2. **ವಿವಿಧ ಮೀಸಲಾತಿ ವರ್ಗಗಳಡಿಯಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅಗತ್ಯತೆಗನುಗುಣವಾಗಿ ಮತ್ತೊಂದು ಸುತ್ತಿನ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಗೆ ಒಳಪಟ್ಟಿರುತ್ತದೆ.**
3. ಪ್ರಕಟಿತ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಲ್ಲಿಕೆಯಾಗಬಹುದಾದ ಆಕ್ಷೇಪಣೆಗಳ ಪೈಕಿ ನಿಯಮಾನುಸಾರ ಪರಿಗಣಿಸಲ್ಪಡಬಹುದಾದ ಆಕ್ಷೇಪಣೆಗಳಿಗೆ ಒಳಪಟ್ಟಿರುತ್ತದೆ.

30/11/2022

(ಹೆಚ್.ಕೆ.ಜಗದೀಶ್)
ನಿರ್ದೇಶಕರು(ಪ್ರ)
ಹಾಗೂ ಆಯ್ಕೆ ಸಮಿತಿ ಸದಸ್ಯ ಕಾರ್ಯದರ್ಶಿಗಳು,
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು